

> ಗಂಡಿನ ಕಣ್ಣಿನ ಮೂಲಕ ಹೆಣ್ಣು ತನ್ನನ್ನು ನೋಡಿಕೊಳ್ಳುವುದು, ಸೌಂದರ್ಯದ ಪರಿಕಲ್ಪನೆಗಳು, ಅಲಂಕಾರ ಎಲ್ಲವನ್ನೂ ವ್ಯಾವಹಾರಿಕ ಜಗತ್ತು ರೂಪಿಸಿರುತ್ತದೆ. ಇದೇ ಫೆಮಿನಿಸ್ಟ್ ಪಾಲಿಟಿಕ್ಸ್. ಇದು ಅರ್ಥವಾದಾಗ ಎದುರಾಳಿಯ ಪ್ರತಿರೋಧಗಳನ್ನು ಎದುರಿಸುವುದು ಹೇಗೆ ಅನ್ನುವುದು ಗೊತ್ತಾಗುತ್ತೆ.

**◆ ತಾತ್ವಿಕ ಗ್ರಂಥಗಳ ಅನುವಾದ ಶುರುವಾದ ಬಗೆ ಹೇಗೆ?**

ಹೆಚ್ಚೆಚ್ಚು ಸ್ತ್ರೀವಾದದ ಪುಸ್ತಕಗಳನ್ನು ಓದುತ್ತಾ ಹೋದಂತೆ ಕನ್ನಡದಲ್ಲಿ ಈ ತರಹದ ಪುಸ್ತಕಗಳಿಲ್ಲ ಅನ್ನಿಸಲು ಶುರುವಾಯಿತು... ಜೊತೆಗೆ ಸ್ತ್ರೀವಾದದ ಕುರಿತು ಪಾಠ ಮಾಡಬೇಕಾಗಿ ಬಂದಾಗ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಓದಲು ಪುಸ್ತಕಗಳಿಲ್ಲ ಅನ್ನುವ ಕೊರತೆ ಕಾಣಿಸಿತು. ಇದೆಲ್ಲ ಸೇರಿ ಕನ್ನಡದಲ್ಲಿ ಈ ಕುರಿತು ಓದಲು ಒಂದಿಷ್ಟು ಪುಸ್ತಕಗಳು ಸಿಗುವಂತಾಗಬೇಕು ಅನ್ನಿಸಿತು. ಮೊದಲು ಸ್ತ್ರೀವಾದ ಕುರಿತು ಓದಲು ಶುರುಮಾಡಿದಾಗ ಕನ್ನಡದ ಸಂದರ್ಭಕ್ಕೆ ಅನ್ವಯಿಸಿ ಲೇಖನಗಳನ್ನು ಬರೆದು 'ಚಹರೆ', 'ಸೇರಿಕೊಂಡ ಎಳೆಗಳು' ಅನ್ನೋ ಲೇಖನಗಳ ಸಂಗ್ರಹವನ್ನು ಅಷ್ಟೊತ್ತಿಗೆ ಪ್ರಕಟಿಸಿದ್ದೆ. ಪುಸ್ತಕಗಳ ಅನುವಾದಕ್ಕೆ ಧೈರ್ಯ ಮಾಡಿ ಮೊದಲಿಗೆ ಅನುವಾದಿಸಿದ್ದು 'ಸೆಕೆಂಡ್ ಸೆಕ್ಸ್'. ಆಮೇಲೆ 'ಬೆಲ್ ಹುಕ್ಸ್', 'ಚಿಮಮಾಂಡ' ಹೀಗೆ ಅನುವಾದ ಮುಂದುವರೆಯಿತು.

**◆ ಸ್ತ್ರೀವಾದದ ಈಗಿನ ಪರಿಸ್ಥಿತಿ ಹೇಗಿದೆ?**

ಬೌದ್ಧಿಕ ಚರ್ಚೆಗಳು ಚಿಂತನೆಗಳು ಆಗಿವೆಯೇ ಹೊರತು ಸಾಮಾಜಿಕವಾಗಿ ನೋಡಿದಾಗ ಪ್ರಜ್ಞೆಯಲ್ಲಿ ಜಾಗೃತಿ ಮೂಡಿಲ್ಲ. ಸ್ತ್ರೀವಾದದ ಬಗ್ಗೆ ಮಾತಾಡೋದು, ಚಿಂತನೆ ಮಾಡೋದು ಬೇರೆ, ಚಿಂತನೆಗಳನ್ನು ಸಮುದಾಯಕ್ಕೆ ದಾಟಿಸಿ ಬದುಕುವ ಹಾಗೆ ಮಾಡುವುದಕ್ಕೆ ಬೇಕಾದ ಬದ್ಧತೆ ಬೇರೆ. ಸ್ತ್ರೀವಾದಿ ಚಿಂತನೆಗಳಿಗೆ ಪಿತೃಪ್ರಧಾನ ವ್ಯವಸ್ಥೆಯು ಬಲವಾದ ಪ್ರತಿರೋಧವನ್ನು